# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 418 |
| ಸದಸ್ಯರ ಹೆಸರು | : | ಶ್ರೀ ಪಿ.ಹೆಚ್.ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 10-12-2025 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಷ್ಟ್ರೀಯ ಹೆದ್ದಾರಿ ಎನ್‌ಹೆಚ್-367ರ ಕಾಮಗಾರಿಯಲ್ಲಿ 25 ಕಿಮೀ ಅಳತೆಯ ಶಿರೂರು ಕ್ರಾಸ್‌ನಿಂದ ಗದ್ದನಕೆರೆ ಕ್ರಾಸ್‌ವರೆಗಿನ ದೂರವನ್ನು ಚತುಷ್ಪಥ ರಸ್ತೆಯನ್ನಾಗಿ ನಿರ್ಮಾಣ ಮಾಡಲಾಗುತ್ತಿದ್ದು ಕಾಮಗಾರಿ ಯಾವ ಯಾವ ಹಂತದಲ್ಲಿದೆ: | ರಾಷ್ಟ್ರೀಯ ಹೆದ್ದಾರಿ ವಲಯ ವ್ಯಾಪ್ತಿಗೆ ಬರುವ ರಾ.ಹೆ-367 ಭಾಗವಾದ ಶಿರೂರ ದಿಂದ ಗದ್ದನಕೇರಿ ಕ್ರಾಸ್‌ವರೆಗೆ 24.265 ಕಿ.ಮೀ ರಸ್ತೆಯನ್ನು ಚತುಷ್ಪಥ ರಸ್ತೆಯನ್ನಾಗಿ ನಿರ್ಮಾಣ/ಅಭಿವೃದ್ಧಿ ಪಡಿಸಲು "Widening to 4 lane from Km. 133.00 to 158.04 (design Chainage Km. 130.88 to 155.145) (Shirur Cross to Gaddankeri) of NH-367 in the State of Karnataka on Engineering Procurement Construction EPC mode "ಕಾಮಗಾರಿಯು 2021-22ನೇ ಸಾಲಿನ ವಾರ್ಷಿಕ ಯೋಜನೆಯಡಿ ಅನುಮೋದನೆಯಾಗಿದ್ದು, ಪ್ರಸ್ತುತ ಕಾಮಗಾರಿ ಪ್ರಗತಿಯಲ್ಲಿದ್ದು ಭೌತಿಕವಾಗಿ 81.62% ಮುಕ್ತಾಯಗೊಂಡಿರುತ್ತದೆ. |
| ಆ) | ಈ ಕಾಮಗಾರಿಗೆ ಸ್ವಾಧೀನ ಪಡಿಸಿಕೊಂಡ ಕಟ್ಟಡಗಳ ಅಳತೆ ಮತ್ತು ವಿತರಿಸಲಾದ ಪರಿಹಾರ ಧನದ ಮೊತ್ತ ಎಷ್ಟು; (ಸಂಪೂರ್ಣ ಮಾಹಿತಿಗಳನ್ನು ನೀಡುವುದು) | **ಗ್ರಾಮವಾರು ಭೂಸ್ವಾಧೀನ, ಕಟ್ಟಡಗಳ ವಿಸ್ತೀರ್ಣದ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.** ಸದರಿ ಕಾಮಗಾರಿಗೆ ಭೂ-ಸ್ವಾಧೀನ ಅಧಿಕಾರಿಗಳಾದ ಉಪ-ವಿಭಾಗಾಧಿಕಾರಿ ಬಾಗಲಕೋಟೆ ಇವರಿಂದ<br>1 **ಮೊದಲನೆಯ ಐತೀರ್ಪು (3(G)) 29/12/2023 ರಂದು ಪ್ರಕಟಿಸಿದ್ದು ವಿವರಗಳು ಕೆಳಕಂಡಂತಿದೆ.** |

| ಕ್ರ ಸಂ. | ಜಮೀನಿನ ವಿವರ | ವಿಸ್ತೀರ್ಣ | ಒಟ್ಟು ಭೂಪರಿಹಾರ ಮೊತ್ತ (ಲಕ್ಷ ರೂ.ಗಳಲ್ಲಿ) | ಪಾವತಿಸಿದ ಪರಿಹಾರ ಮೊತ್ತ (ಲಕ್ಷ ರೂ.ಗಳಲ್ಲಿ) |
|---|---|---|---|---|
| 1. | ಸರ್ಕಾರಿ ಜಮೀನು | 0.823 ಹೆಕ್ಟೇರ್ | 86.00 | 0.00 |
| 2. | ಖಾಸಗಿ ಜಮೀನು | 0.447 ಹೆಕ್ಟೇರ್ | 38.00 | 38.00 |
| 3. | ಕಟ್ಟಡಗಳು | - | - | - |
| | ಒಟ್ಟು | **1.27 ಹೆಕ್ಟೇರ್** | **124.00** | **38.00** |

2. **ಎರಡನೆಯ ಐತೀರ್ಪು (3 (G)) 05.11.2025 ರಂದು ಪ್ರಕಟಿಸಿದ್ದು ವಿವರಗಳು ಕೆಳಕಂಡಂತಿದೆ (ಬಿಟ್ಟು ಹೋದ ಪ್ರಕರಣಗಳು):**

| ಕ್ರ ಸಂ. | ಜಮೀನಿನ ವಿವರ | ವಿಸ್ತೀರ್ಣ | ಒಟ್ಟು ಭೂಪರಿಹಾರ ಮೊತ್ತ (ಲಕ್ಷ ರೂ.ಗಳಲ್ಲಿ) | ಪಾವತಿಸಿದ ಪರಿಹಾರ ಮೊತ್ತ (ಲಕ್ಷ ರೂ.ಗಳಲ್ಲಿ) |
|---|---|---|---|---|
| 1. | ಜಮೀನು | 3.13 ಹೆಕ್ಟೇರ್ | 2981.00 | - |
| 2. | ಕಟ್ಟಡಗಳು | 0.43 ಹೆಕ್ಟೇರ್ | 2625.16 | - |
| | ಒಟ್ಟು | **3.56 ಹೆಕ್ಟೇರ್** | **5606.16** | - |

| ಕ್ರ ಸಂ. | ಪ್ರಶ್ನೆ | ಉತ್ತರ |
| --- | --- | --- |
| | | ಮೇಲ್ಕಂಡ ಎರಡನೇ ಐತೀರ್ಪಿನ ಭೂ-ಸ್ವಾಧೀನಕ್ಕೆ ಒಳಪಟ್ಟ ಪರಿಹಾರ ಬಟವಡೆಗಾಗಿ ಅವಶ್ಯವಿರುವ ದಾಖಲೆಗಳನ್ನು ಭೂ-ಸ್ವಾಧೀನಾಧಿಕಾರಿಗಳು ಪಡೆದುಕೊಳ್ಳುತ್ತಿದ್ದು ಭೂಪರಿಹಾರ ಮೊತ್ತ ವಿತರಣೆಗೆ ಕ್ರಮ ವಹಿಸಲಾಗುವುದು.<br>ಮುಂದುವರೆದು, ಕೇಂದ್ರ ಭೂಸಾರಿಗೆ ಮತ್ತು ಹೆದ್ದಾರಿಗಳ ಮಂತ್ರಾಲಯದಿಂದ ರೂ.14.54 ಕೋಟಿ ಭೂಪರಿಹಾರ ಮೊತ್ತ ಮಂಜೂರಾಗಿದ್ದು, ಹೆಚ್ಚುವರಿ ಐತೀರ್ಪಿನ ಪರಿಹಾರ ಧನದ ವಿತರಣೆಗಾಗಿ ರೂ.43.41 ಕೋಟಿಗಳಿಗೆ ಅನುಮೋದನೆ ಕೋರಿ ಕೇಂದ್ರ ಭೂಸಾರಿಗೆ ಮತ್ತು ಹೆದ್ದಾರಿಗಳ ಮಂತ್ರಾಲಯ, ನವದೆಹಲಿ ಇವರಿಗೆ ದಿನಾಂಕ: 10.11.2025 ರಂದು ಪ್ರಸ್ತಾವನೆ ಸಲ್ಲಿಸಲಾಗಿದೆ. ಅನುಮೋದನೆಗೊಂಡ ನಂತರ ಭೂಸ್ವಾಧೀನಕ್ಕೆ ಒಳಪಟ್ಟ ಜಮೀನಿನ ಭೂಮಾಲೀಕರುಗಳಿಗೆ ಪರಿಹಾರ ಪಾವತಿಸಲಾಗುವುದು. |
| ಇ) | ರಸ್ತೆಯ ಅಗಲೀಕರಣ ಸಂಧರ್ಭದಲ್ಲಿ ಅವಶ್ಯಕವಾದ ಹೆಚ್ಚುವರಿ ಕ್ಷೇತ್ರವು ರಸ್ತೆಯ ಮಧ್ಯಭಾಗದ ಎರಡು ಬದಿಗಳಲ್ಲಿ ಸಮನಾಗಿ ಒಳಗೊಳ್ಳುವಂತೆ ವಶಪಡಿಸಿಕೊಳ್ಳುವ ನಿಯಮವಿದ್ದರೂ ಕೆಲವರಿಗೆ ಮಾತ್ರ ಸಹಾಯ ಮಾಡುವಂತೆ ಒಂದೇ ಬದುವಿನಲ್ಲಿ ಅಲ್ಲಲ್ಲಿ ಅಗಲೀಕರಣ ಮಾಡಲಾಗುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು? (ಸಂಪೂರ್ಣ ಮಾಹಿತಿಯನ್ನು ಒದಗಿಸುವುದು) | ಸದರಿ ರಸ್ತೆಯ ಅಗಲೀಕರಣ ಕಾಮಗಾರಿ ಭೂಸಾರಿಗೆ ಮಂತ್ರಾಲಯ ನವದೆಹಲಿಯಿಂದ ಮಂಜೂರಾದ ಪಂಕ್ತಿಕರಣದ ಪ್ರಕಾರ ಕೈಗೊಳ್ಳಲಾಗುತ್ತಿದ್ದು, ಅದರಂತೆ ಅವಶ್ಯವಿರುವ ಭೂಸ್ವಾಧೀನ ಪ್ರಕ್ರಿಯೆ ಕೂಡ ಮಾಡಲಾಗುತ್ತಿದೆ. ಮುಂದುವರೆದು ಸದರಿ ಭಾಗದ ಕಿ.ಮೀ 144.254 ರಲ್ಲಿ ಬರುವ ರೈಲ್ವೆ ಮೇಲ್ಸೇತುವೆಯು, ರೈಲ್ವೆ ಇಲಾಖೆಯಿಂದ ಅನುಮೋದನೆಗೊಂಡು, ಸದರಿ ನಕ್ಷೆಗೆ ಅನುಗುಣವಾಗಿ ಭೂಸ್ವಾಧೀನ ಕಾರ್ಯ ಕೈಗೊಳ್ಳಲಾಗುತ್ತಿರುತ್ತದೆ. |

ಲೋಇ 453 ಸಿಎನ್‌ಹೆಚ್ 2025(ಇ)

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು

# ಅನುಬಂಧ

| Sl No | Village Name | Land Area (Ha) | Land Value (in Rs.) | Structure area (Ha) | Structure Value (in Rs.) | Total Award amount (including Govt & Private) (in Rs.) | Dispersed amount (private) (in Rs.) |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| **1st Award dtd: 29/12/2023** | | | | | | | |
| 1 | Bagalkot | 0.2565 | 1,16,25,628 | 0 | 0 | 1,16,25,628 | 30,69,068 |
| 2 | Shirur | 0.959 | 8,03,658 | 0 | 0 | 8,03,658 | 8,03,658 |
| | | **1.2155** | **1,24,29,286** | **0** | **0** | **1,24,29,286** | **38,72,726** |
| **Additional Award dtd:05.11.2025** | | | | | | | |
| 1 | Bagalkot | 1.35344 | 27,15,30,102 | 0.3563590 | 18,15,62,535.1 | 45,30,92,637.1 | 0.0 |
| 2 | Gaddanakeri | 0.8392502 | 1,64,99,420 | 0.078 | 7,95,71,409.95 | 9,60,70,830.0 | 0.0 |
| 3 | Shirur | 0.0833695 | 2,28,176 | 0 | 0 | 2,28,176.0 | 0.0 |
| 4 | Honnakatti | 0.2580565 | 14,33,257 | 0 | 3,79,102 | 18,12,359.0 | 0.0 |
| 5 | Muranal | 1.0129021 | 62,22,750 | 0 | 7,50,530 | 69,73,280.0 | 0.0 |
| 6 | Anadinni | 0.010117 | 21,87,810.04 | 0.010117 | 2,50,840 | 24,38,650.0 | 0.0 |
| | **Total :-** | **3.557135** | **29,81,01,515** | **0.4444760** | **26,25,14,417.1** | **56,06,15,932.1** | **0.0** |
| | **Grand total** | **4.772635** | **31,05,30,801** | **0.44448** | **26,25,14,417** | **57,30,45,218** | **38,72,726** |